ಶ್ರೀ ಧರ್ಮಸಿಂಗ್: ವಿವರವಾದ ನೋಟನ್ನು ಈ ಬಗ್ಗೆ ನನ್ನ ಉತ್ತರದಲ್ಲಿ ಕೊಟ್ಟಿದ್ದೇನೆ.

ಅಧ್ಯಕ್ಷರು: ಶ್ರೀ ಆರ್.ಎಲ್. ಜಾಲಪ್ಪ: ಶ್ರೀ ಕೆ.ಡಿ. ಪ್ರಭುಕುಮಾರ್ (ಮಾನ್ಯ ಸದಸ್ಯರುಗಳು ಗೈರುಹಾಜರಾಗಿದ್ದರು)

ಮದ್ಯಸಾರ ಭಟ್ಟಿ ಇಳಿಸುವ ಕಾರ್ಖಾನೆಗಳಿಗೆ ಪರವಾನಿಗೆ ನೀಡಿರುವುದು

454 – ಶ್ರೀ ಸಿ ಬೈರೇಗೌಡ (ವೇಮಗಲ್) ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಿನಾಂಕ 1-11-90 ರವರೆಗೆ ಲೈಸನ್ಸ್ ನೀಡಲಾದ ಡಿಸ್ಟಿಲರಿಗಳ ಸಂಖ್ಯೆ ಎಷ್ಟು (ಅವುಗಳ ಹೆಸರುಗಳನ್ನು ನೀಡಿ)

ಆ) ಇವುಗಳಲ್ಲಿ ಕಾಕಂಬಿ ಆಧಾರಿತ ಮತ್ತು ಕಾಕಂಬಿಯೇತರ ಡಿಸ್ಟಿಲರಿಗಳ ಸಂಖ್ಯೆ ಎಷ್ಟು (ಅವುಗಳ ಹೆಸರುಗಳನ್ನು ನೀಡಿ)

ಇ) ಪ್ರತಿಯೊಂದು ಡಿಸ್ಟಿಲರಿಗಳು ಉತ್ಪಾದಿಸಿದ ಮದ್ಯಸಾರದ ಪ್ರಮಾಣ ಎಷ್ಟು?

ಈ) ಕಾಕಂಬಿ ಆಧಾರಿತ ಮತ್ತು ಕಾಕಂಬಿಯೇತರ ಕಚ್ಚಾ ವಸ್ತುಗಳಿಂದ ಉತ್ಪಾದಿಸುವ ಮದ್ಯಸಾರವನ್ನು ಉಪಯೋಗಿಸಿ ಭಾರತೀಯ ಮದ್ಯಗಳನ್ನು ಉತ್ಪಾದಿಸುವ ಎಷ್ಟು ಡಿಸ್ಟಿಲರಿಗಳಿಗೆ ಲೈಸನ್ಸ್ ನೀಡಲಾಗಿದೆ (ಅವುಗಳ ಹೆಸರನ್ನು ತಿಳಿಸಿ)

ಉ) ಕಾಕಂಬಿಯೇತರ ಕಚ್ಚಾವಸ್ತುಗಳಿಂದ ಉತ್ಪಾದಿಸಲಾದ ಮದ್ಯಸಾರವನ್ನು ಉಪಯೋಗಿಸಿಕೊಂಡು ಭಾರತೀಯ ಮದ್ಯಗಳನ್ನು ತಯಾರಿಸಲು ಲೇಸೆನ್ಸ್ ಪಡೆದ ಕೆಲವು ಡಿಸ್ಟಿಲರಿಗಳಿಗೆ ಕಾಕಂಬಿ ಆಧಾರಿತ ಮದ್ಯಸಾರವನ್ನು ನೀಡಲಾಗಿದೆಯೇ (ಅಂತಹ ಡಿಸ್ಟಿಲರಿಗಳ ಹೆಸರುಗಳು ಮತ್ತು ಹಂಚಿಕೆ ಮಾಡಲಾದ ಮದ್ಯಸಾರದ ಪ್ರಮಾಣ ಮತ್ತು ಹಂಚಿಕೆಯ ಕಾರಣಗಳನ್ನು ನೀಡಿ)

ಶ್ರೀ ಕೆ ಶಿವಮೂರ್ತಿ, (ಅಬಕಾರಿ ರಾಜ್ಯ ಸಚಿವರು.)

ಒಟ್ಟು ಡಿಸ್ಟಿಲರಿಗಳು - 27 (ಪಟ್ಟಿಯನ್ನು ಅನುಬಂಧ-1ರಲ್ಲಿ ಲಗತ್ತಿಸಲಾಗಿದೆ)

ಅ) ಕಾಕಂಬಿ ಆಧಾರಿತ 20

ಆ) ಕಾಕಂಬಿಯೇತರ 7
(ಪಟ್ಟಿಯನ್ನು ಅನುಬಂಧ -2 ರಲ್ಲಿ ಲಗತ್ತಿಸಲಾಗಿದೆ)

ಅನುಬಂದ - 3 ರಲ್ಲಿ ತೋರಿಸಲಾಗಿದೆ.

ಐ.ಎಂ.ಎಲ್. ಡಿಸ್ಟಿಲರಿಗಳು:

ಅ) ಕಾಕಂಬಿ ಆಧಾರಿತ 28

ಆ) ಕಾಕಂಬಿಯೇತರ 8
(ಪಟ್ಟಿಯನ್ನು ಅನುಬಂಧ - 4 ರಲ್ಲಿ ಲಗತ್ತಿಸಿದೆ)

ಹೌದು ಅವುಗಳಂದರೆ:

1. ಮೆ. ಹೆಚ್.ದಾಸಪ್ಪ ಅಂಡ್ ಸನ್ಸ್ (ಪ್ರೈ) ನಿಯಮಿತ 6 00,000 ಲೀಟರ್‌ಗಳು
2. ಮೆ. ಹೆಚ್.ಇ. ಡಿಸ್ಟಿಲರಿ(ಪ್ರೈ) ನಿಯಮಿತ ಶಿವಮೊಗ್ಗ 2,24,000 ಲೀಟರ್‌ಗಳು.

ರಾಜ್ಯದ ಅದಾಯ ಹಿತದೃಷ್ಟಿಯಿಂದ ಸರ್ಕಾರವು ನಿರ್ಣಯಿಸಿದಂತೆ ಸ್ಥಳೀಯ ಮದ್ಯ ತಯಾರಿಕಾ ಲೈಸನ್ಸ್‌ದಾರರಿಗೆ ಪೂರೈಕೆ ಆದ ನಂತರ ಹೆಚ್ಚುವರಿಯಾಗಿ ಉಳಿಯುವ ಕಾಕಂಬಿ ಮತ್ತು ಮದ್ಯಸಾರವನ್ನು ಮೌಲ್ಯ ಹೆಚ್ಚು ತರುವ ವಸ್ತುಗಳನ್ನಾಗಿ

ಪರಿವರ್ತಿಸಲು (ಅಂದರೆ ಸಾರಾಯಿ ಮತ್ತು ದೇಶೀಯ ಮದ್ಯಗಳು) ಅವಕಾಶ ಮಾಡಲಾಗಿದೆ.

ANNEXURE I & II

STATEMENT SHOWING THE NAME AND ADDRESSES OF THE DISTILLERIES MANUFACTURING RECTIFIED SPIRIT OUT OF MOLASSES AND NON MOLASSES BASED RAW MATERIALS.

MOLASSES BASED "FUNCTIONING DISTILLERIES"

1. M/s BT& FC (P) Ltd., Hiriyur, Chitradurga District,
2. M/s Distillers Co.(p) Ltd., Nidige, Machenhalli, Shimoga District.
3. M/s Gauri Industries, Gauribidanur, kolar District.
4. M/s Gemini Distilleries Ltd. Nanjangud, Mysore District.
5. M/s India Brewery & Distillery Ltd., Hallikhed,Bidar District.
6. M/s Kap Chem Ltd., Plot No.99 belgola Industrial Area, Metagalli, Mysore-16.
7. M/s Khoday Distilleries Ltd., K.K.Agrahara Anekal taluk, B'lore.
8. M/s Mysore Sugar Co. Ltd., Sugar Town, Mandya district.
9. M/s Pampasar Distillery Ltd., Chitwadgi,Hospet, Belllary District.
10. M/s ravindra & Co. (p) Ltd., (Lessees M.Narasa Reddy and G.Gangareddy) Mallick Mirjapur,bidar District.
11. M/s sapthagiri Enterprises, (Lessees M/s S.O.C.Ltd.,) sameerwadi, Mudhol taluk, Bijapur District.
12. M/s H.S.S.K.N. sankeshwar, Belgaum district.
13. M/s Ugar Sugar works Ltd., Ugarkhurd, Belgaum dist.

MOLASSES BASED NON FUNCTIONING DISTILLERIES

1. M/s Ashish Distillery & Chemicals Ltd. Agalkere villege, Raichur.
2. M/s Chamundi Distilleries (p) Ltd., Holesalu village,T.N. Pura taluk, Mysore District.
3. M/s Malaprabha Co-op.Sugar Factory Ltd.,M.K. Hubli,Belgaum District
4. M/s Mysore paper Mills Ltd., Bhadravathi,shimoga District.
5. M/s Pandavpura SSK Ltd., Pandavapura Mandya District.
6. M/s Sowmya Distilleries (p) Ltd., Holenarsipura taluk, Hassan Dist.
7. M/s West India Distilleries (p) Ltd., Dhupadal Area, M.K.Hubli, Belgaum District.

NON MOLASSES BASED "FUNCITIONING DISTILLERIES"

1. M/s H.Dasappa & Sons (p) Ltd.,plot No.47, Peenya II phase, Industrieal area, Bangalore-58 (Using Spl.allotment of molasses bassed rectified Spirit.)
2. M/s H.E.Distillery (p)Ltd., Chikkakduali Village,Holalur Hobli, Shimoga taluk, Shimoga District (Using Spl.Allotment of molasses based Rectified Spirit).

NON MOLASSES BASED "NON FUNCTIONING DISTILLERIES":

1. M/s A.J.Distilleries Sy.No.56/36 of Ullal (Someswara village) Mangalore taluk, D.K.district.
2. Sri. V.S.Rajendra Babu, M/s alchem Industries, Sy.No.184, Biravvahalli Village, Kasaba Hobli, Magadi taluk, B'lore(R)Dist.
3. Sri Y.H.Irkal,M/s somaras distilleries, Sattur village, Dharwad taluk, Dharwad district.
4. Sri. National Distilleries & allied Products, Kushalanagar, Kodagu dist.
5. M/s Kodagu Distilleries (p) Ltd., Periyapatna taluk, Mysore district.

Total 27

ANNEXURE - III

Statement showing the production of rectified spirits during the period from July 1990 to November 1990.

Sl. No.	Name of the Distillery	July	August	Septem-ber	Octo-ber	Novem-ber
1.	M/s. BT & FC Ltd., Hiriyur	352782 6275	319535 8297	258930 23067	221586 —	244866 32020
2.	M/s. Distillers Co., (P) Ltd., Shimoga	363710 —	295840 2850	392770 —	196800 —	134285 —
3.	M/s. Gauri Industries, Gauribidanur.	276954 14009	258845 10173	250152 6962	279397 13644	265280 11166
4.	M/s. Gemini Distilleries Ltd., Nanjangud	Not furnished due to pollution problem	559428 32435	72088 9275	541694 24250	633556 62725
5.	M/s. India Bre. & Disti. Ltd., Bidar.	25168 26690	63175 4703	— 7048	132664 17832	63389 4704
6.	M/s. Kap Chem Ltd., Mysore.	190229 —	242810 —	409366 —	310384 —	353989 —
7.	M/s. Khoday Distilleries Ltd., B'lore.	395430 —	403725 1200	208185 —	157760 —	281815 —

8.	M/s. Mysore Sugar Co., Ltd., Mandya.	458492 25958	92953 4974	860894 50947	737625 39931	1030695 33375
9.	M/s. Pampasar Distilleries Ltd., Hospet.	765986 36621	328588 1325	194328 25344	542328 42406	768261 49132
10.	M/s. Ravindra & Co., (P) Ltd., Bidar	37482 2127	80068 4446	71761 2071	45397 1437	87167 882
11.	M/s. Sapthagiri Enterprises, Sameerwadi.	803577 18955	835919 —	682918 —	747399 —	580298 15298
12.	M/s. HSSKN Sankeshwar	689220 13657	1239284 1517	214504 6990	161521 8532	847611 48694
13.	M/s. Ugar Sugar Works Ltd., Ugarkhurd.	572432 35360	216082 14539	294612 12597	296973 2697	599947 26526
	Total Above 66° OP RS	4931462	4973761	3890508	4311528	5891162
	Total Below 65° OP RS	179692	86459	144901	150867	304522
	Grant Total	5111154	5060220	4035409	4462395	6195684

ANNEXURE - IV

Name and Address of the Distilleries (IML Out of Molasses based Spirit)

FUNCTIONING

1. M/s Amruth Distilleries Ltd., No. 36, S.T. Road, Bangalore - 27.
2. M/s Bangalore Grape Winery (p) Ltd., No. 53/2, Tavarakere Village, No. 13, Banneragatta Road, Green Field, Bangalore - 29
3. M/s. Brindavan Distilleries (p) Ltd., Arakere Village, Bannergatta Road, Bangalore.
4. M/s Gemini Distilleries Ltd., (Leasee M/s Tracstar Investments (p) Ltd., Calcutta,) 8th Mile Stone, Tumukur Road, Nagasandra, Bangalore-73.
5. M/s Gemini Distilleries Ltd., III Km. Chamarajanagar Road, Nanjangud, Mysore District.
6. M/s Habib Distilleries (p) Ltd. 2, Victoria Road, Hubli, Dharwad District.
7. M/s India Brewery & Distilleries Ltd., No. 32, J.P.Nagar Industrial Estate, III phase, Bangalore-78.
8. India Brewery & Distillery Ltd., Hallikad, 'B' Ameerabad, Bidar.
9. Kalburgi Distilleries, 39, 2A of Mariyan Timsagar, Huili, Dharwad District.
10. M/s Karnataka Brewery & Distillery (p) Ltd., 9th Mile Tumkur Road, Bangalore.

11. M/s Khoday Brewing and Distilling Ind., (Unit No.2), Distillery Division, 7th Mile, Kanakapura Road, Bangalore-62.
12. M/s Khoday Distilleries Ltd., No.54, K.K.Agrahara, Anekal Taluk, Bangalore District.
13. M/s Khoday R.C.A Industires, No.11, Race Cource Road, Bangalore-9.
14. M/s Mysore Sugar Co., Ltd,. Sugar Town, Mandaya.
15. Nirayu (p) Ltd. Whitefield, Near Railway Station, Bangalore. 66.
16. M/s Pals Distilleries Ltd., Lessees: M/s. G. Ganga Reddy & m. Narasareddy, Jalahalli Camp Road, Yeshwantpur, Bangalore-22.
17. M/s Pampasar Distillery Ltd., Chitwadgi, Hospet, Bellary District.
18. Ravindra & Co. (p) Ltd. (Leassees M.Narasa Reddy & Ganga Reddy) Sy.No. 96, Mallick Mirjapur, Bidar.
19. Sapthagiri Distilleries (p) Ltd. (Lessees M/s. Mysore Wine products Ltd.) Shayara Orchards, Kumbalgod, Bangalore-74.
20. Ugar Sugar works Ltd. Ugarkhurd, Athani Taluk, Belgaum District.
21. K.V.Venkatagiri, M/s. Venus Distilleries, 7th cross, Magadi Road, Bangalore - 23.
22. M/s Vorian Distilleries. Inc. No.1, Industrial Suborb, Yeshwanthapur, Bangalore - 22.
23. M/s. Yezdi Distilleries, Bannimantap Layout, Mysore-15.
24. M/s Shree Durga Distillery, Kaup, Dakshina Kannada.
25. M/s Sri Ram Distilleries (p) Ltd., 4/1, Sria Road, Tumkur.
26. M/s Amruth Distilleries Ltd., Kambipura, Kumbalgod, Bangalore 74.

NON FUNCTIONING

1. M/s. Brindavan Distilleries (p) Ltd., No. 97, Koramangala Industrial Estate, Bangalore-34.
2. M/s B.T. & F.C. (p) Ltd., Sy.No. 15, I phase, Peenya, Bangalore-58.

DISTILLERIES PERMITTED TO MANUFACTURE IML OUT OF NON MOLASSES BASED SPIRIT.

FUNCTIONING

1. M/s H.Dasappa & Sons (p) Ltd., Plot No. 47, Peenya, II phase, Industrial Area, Bangalore-58.
2. M/s H.E.Distillery (p) Ltd., Chikkakudali Village, Holalur Hobli, Shimoha Taluk, Shimoga District.

NON FUNCTIONING

1. M/s A.J.Distilleries, Sy. No. 56/36, of Ullal (Someswara Village) Mangalore Taluk, D.K.District.
2. Sri. V.S. Rajendra Babu. M/s Alchem Industies, Sy.No.184, Birvanahalli Village, Kasaba Hobili, Magdi Taluk, Bangalore Rural District.
3. Sri. Y.H. Irkal M/s. somaras Distilleries, Sattur Village of Dharwad Taluk, Dharwad District.
4. M/s National Distilleries & Allied Products, Kushalnagar, Kodagu District.
5. Sri Prasad Palegar M/s Pepsip Wines, & Spritis (p) Ltd. Plot No. 40, Mallapura Village, Kasaba Hobli, Nelamangala Taluk, Bangalore Rural District.
6. Sri Krishna B. Sindhe, M/s. Trishul Wineries & Distilleries, proposed at Bellary Taluk of Bellary District.

ಶ್ರೀ ಬೈರೇಗೌಡ : ಮಾನ್ಯ ಅಧ್ಯಕ್ಷರೇ ಎರಡು ಡಿಸ್ಟಿಲರಿಗಳಿಗೆ ನಾನ್ ಮೋಲಾಸಿಸ್ ಬೇಸ್ಡ್ ಮೊಲಾಸಿಸ್ ಕೊಟ್ಟು ಸ್ಪಿರಿಟ್‌ನ್ನು ಉತ್ಪಾದನೆ ಮಾಡುವುದಕ್ಕೆ ಮತ್ತು ಸ್ಪಿರಿಟನ್ನು ಕೊಡತಕ್ಕಂಥದಕ್ಕೆ ತಾವು ಒಪ್ಪಿದ್ದೀರಿ. ಒಬ್ಬರು ಮೆ.ಹೆಚ್.ಸಿ. ದಾಸಪ್ಪ ಅಂಡ್ ಸನ್ಸ್ ರವರಿಗೆ ಸುಮಾರು 6 ಲಕ್ಷ ಲೀಟರ್‌ಗಳವರೆಗೆ ಕೊಟ್ಟಿದ್ದೀರಿ. ಇನ್ನೊಬ್ಬರು ಮೆ.ಹೆಚ್.ಇ. ಡಿಸ್ಟಿಲರಿಯವರಿಗೆ 2 ಲಕ್ಷ 24 ಸಾವಿರ ಲೀಟರ್‌ವರೆಗೆ ಕೊಟ್ಟಿದ್ದೀರಿ. ಇವರು ಈ ಸ್ಪಿರಿಟನ್ನು ಉಪಯೋಗಿಸಿಕೊಂಡು ಏನನ್ನು ತಯಾರು ಮಾಡಿದರು? ಸಾರಾಯಿಯನ್ನು ತಯಾರು ಮಾಡಿದರೆ ಅಥವಾ ಐ.ಎಮ್.ಎಫ್.ಎಲ್. ತಯಾರು ಮಾಡಿದರೆ ಎಂದು ಹೇಳುತ್ತೀರಾ.?

ಶ್ರೀ ಎಸ್. ಬಂಗಾರಪ್ಪ: ಮಾನ್ಯ ಸಭಾದ್ಯಕ್ಷರೆ ಎರಡು ಡಿಸ್ಟಿಲರಿಗಳಾದ ಮೆ. ದಾಸಪ್ಪ ಅಂಡ್ ಸನ್ಸ್ ಮತ್ತು ಮೆ.ಹೆಚ್.ಇ. ಡಿಸ್ಟಿಲರಿ (ಪ್ರೈ) ಲಿಮಿಟೆಡ್ ಎನ್ನತಕ್ಕಂಥವರು ಇವರಿಬ್ಬರಿಗೂ ಕೂಡ ನಾನ್ ಮೊಲಾಸಿಸ್ ಬೇಸ್ಡ್ ಇರತಕ್ಕಂಥದ್ದು ಇವರು ತಯಾರು ಮಾಡತಕ್ಕಂಥದ್ದು ಏನೆಂದರೆ ಐ.ಎಂ.ಎಫ್.ಎಲ್. ರಾಜ್ಯಕ್ಕೆ ಇನ್ನೂ ಜಾಸ್ತಿ ಬೇಕು ಎನ್ನುವ ಉದ್ದೇಶದ್ದಿಂದ ಆ ರೀತಿ ಪರವಾನಿಗೆಯನ್ನು ಕೊಟ್ಟಿರುತ್ತೇವೆ.

ಶ್ರೀ ಸಿ. ಬೈರೇಗೌಡ: ಮಾನ್ಯ ಸಭಾಧ್ಯಕ್ಷರೆ ಈ ಡಿಸ್ಟಿಲರಿಗಳಿಗೆ ಲೈಸೆನ್ಸ್‌ಗಳನ್ನು ಕೊಟ್ಟಿರತಕಂಥದ್ದು ಬೇರೆ ಪ್ರಾಡಕ್ಟ್‌ಗಳಿಂದ ಸ್ಪಿರಿಟ್ ತಯಾರು ಮಾಡಬೇಕೆಂದು ಅಂದರೆ ಮರಗೆಣಸಿನಿಂದ ಮತ್ತು ಬೇರೆ ಬೇರೆ ಮೆಟೀರಿಯಲ್ಸ್‌ನಿಂದ ಸ್ಪಿರಿಟ್ನು ತಯಾರು ಮಾಡಬೇಕೆಂದು ಕೊಟ್ಟಿತಕ್ಕಂಥದ್ದು ಈ ಲೈಸೆನ್ಸ್‌ಗಳನ್ನು ಕೊಡತಕ್ಕಂಥ ಸಂದರ್ಭದಲ್ಲಿ ಮೊಲಾಸಿಸ್ ನಮ್ಮಲ್ಲಿ ಇನ್ನು ಮುಂದೆ ಸಹ ಸಾಕಷ್ಟು ದೊರಕುವಂತಿಲ್ಲವೆನ್ನುವ ಆಧಾರದಮೇಲೆ ನಾನ್ಮೊಲಾಸಿಸ್ ಬೇಸ್ಡ್ ಡಿಸ್ಟಿಲರಿಗಳಿಗೆ ಅನುಮತಿ ಕೊಡುತ್ತೇವೆ. ಏಕೆಂದರೆ ವ್ಯವಸಾಯ ರಂಗದಲ್ಲಿ ಉತ್ಪತ್ತಿ ಯಾಗತಕ್ಕಂಥ ಬೇರೆ ಉತ್ಪನ್ನಗಳಿಗೂ ಕೂಡ ಬೆಲೆ ಬರಬೇಕು ಎನ್ನುವ ಕಾರಣಕ್ಕಾಗಿ ಈ ಲೈಸೆನ್ಸ್‌ಗಳನ್ನು ಕೊಟ್ಟಿರತಕ್ಕಂಥದ್ದು ಈಗ ಈ ಬಗ್ಗೆ ಸರ್ಕಾರ ಡಿಸಿಷನ್ ತೆಗೆದುಕೊಂಡಿದೆ ಎಂದು ತಾವು ಹೇಳುತ್ತಿದ್ದೀರಿ. ಇದರಿಂದ ಲೈಸೆನ್ಸ್‌ಗಳನ್ನು ಕೊಟ್ಟಿರತಕ್ಕಂಥ ನಿಬಂಧನೆಗಳನ್ನು ಉಲ್ಲಂಘನೆ ಮಾಡಿದಂತಾಗುವುದಿಲ್ಲವೆ? ಈಗ ಈ ರೀತಿ ಉಲ್ಲಂಘನೆಯಾಗುವುದರಿಂದ ವ್ಯವಸಾಯ ರಂಗದಲ್ಲಿ ಉತ್ಪಾದನೆಯಾಗತಕ್ಕಂಥ ಮರಗೆಣಸು ಮುಂತಾದುವುಗಳೇನು ಇವೆ ಅವುಗಳನ್ನು ಬೆಳೆದ ರೈತರಿಗೆ ಸರಯಾದಂಥ ಮತ್ತು ಸೂಕ್ತವಾದಂಥ ಬೆಲೆ ಸಿಕ್ಕದಂತಾಗಿದೆಯಲ್ಲವೆ?

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸದಸ್ಯರು ಹೇಳಿರತಕ್ಕ ಮೊದಲನೇ ಪ್ರಶ್ನೆಯ ಅರ್ಧ ಭಾಗ ಸರಿ. ಅಂದರೆ ನಾನ್ ಮೊಲಾಸಿಸ್ ಬೇಸಿಗೆ ಅಂದರೆ ಮರಗೆಣಸು ಮತ್ತೊಂದನ್ನು ಉಪಯೋಗಿಸಿ ಮದ್ಯವನ್ನು ತಯಾರಿಸಬೇಕೆಂದು ಲೈಸೆನ್ಸ್ ಕೊಟ್ಟಿರುವುದು. ಆದರೆ ರಾಜ್ಯಕ್ಕೆ ಹೆಚ್ಚಿಗೆ ವರಮಾನ ತರಬೇಕೆಂಬ ದೃಷ್ಟಿಯಿಂದ ಈ ಮಧ್ಯೆ ಏನು ಮಾಡಿದ್ದಾರೆಂದರೆ ಕಾಕಂಬಿ ಮತ್ತು ಮದ್ಯಸಾರವನ್ನು ಉಪಯೋಗ ಮಾಡಿ ಹೆಚ್ಚಿನ ರೀತಿಯಲ್ಲಿ ಮದ್ಯ ತಯಾರಿಸುವುದಕ್ಕೆ ಈ ಎರಡು ಡಿಸ್ಟಿಲರಿಗಳಿಗೆ ಲೈಸೆನ್ಸ್ ಕೊಟ್ಟಿರತಕ್ಕದ್ದು ರೆಕಾರ್ಡ್ ಪ್ರಕಾರ ತಿಳಿದುಬರುತ್ತದೆ.

ಶ್ರೀ ಸಿ. ಬೈರೇಗೌಡ : ಇಲ್ಲಿ ಸರ್‌ಪ್ಲಸ್ ಮೊಲಸಿಸ್ ಎಂದು ಹೇಳುತ್ತಿದ್ದೀರಿ. 6 ಲಕ್ಷ ಲೀಟರ್ ಮತ್ತು 2 ಲಕ್ಷದ 24 ಸಾವಿರ ಲೀಟರ್ ಮದ್ಯವನ್ನು ಕೊಟ್ಟಂತಹ ಸಂದರ್ಭದಲ್ಲಿ ಸರ್‌ಪ್ಲಸ್ ಮೊಲಾಸಿಸ್ ಎಷ್ಟಿತ್ತು ಮತ್ತು ಅದೇ ರೀತಿ ಇವರು ಕೊಡಬೇಕಾಗಿದ್ದರೆ ಬೇರೆ ಲೈಸೆನ್ಸ್ ಹೊಲ್ಡರ್ಸ್ ಏನಿದ್ದಾರೆ, ಅವರ ಒಂದು ರಿಕ್ವೈರ್‌ಮೆಂಟ್ ಎಷ್ಟಿತ್ತು? ಎಂಬುದನ್ನು ತಿಳಿಸುತ್ತೀರಾ?

ಶ್ರೀ ಎಸ್.ಬಂಗಾರಪ್ಪ : ಈ ಎರಡು ಜನರಿಗೆ ಅಂದರೆ ದಾಸಪ್ಪ ಅಂಡ್ ಸನ್ಸ್ ಮತ್ತು ಹೆಚ್.ಇ. ಡಿಸ್ಟಿಲರೀಸ್‌ನವರಿಗೆ ಕೊಟ್ಟಿರತಕ್ಕದ್ದು. ನಾವು ಯಾರಿಗೇ ಆಗಲಿ ಸಪ್ಲೈ ಮಾಡಬೇಕಾದರೆ ಮೊದಲು ಲೈಸೆನ್ಸ್ ಪ್ರಕಾರ ಕೊಡುತ್ತೇವೆ. ಏಕೆಂದರೆ ಮೊಲಾಸಿಸ್ ಒಂದೊಂದು ಸಾರಿ ಕಡಿಮೆ ಬರುತ್ತದೆ. ಒಂದೊಂದು ಸಾರಿ ಜಾಸ್ತಿ ಬರುತ್ತದೆ. ಇದು ಜಾಸ್ತಿ ಬಂದಾಗ ಅದು ಹಾಳಾಗುತ್ತದೆ. ಅಂಥ ಸಂದರ್ಭಗಳಲ್ಲಿ ಹೆಚ್ಚಿಗೆ ಪರವಾನಗಿ ಕೊಟ್ಟು ಅದರಿಂದ ನಮಗೆ ವರಮಾನ ಬರುವ ದೃಷ್ಟಿಯಿಂದ ಆ ರೀತಿ ಸರಬರಾಜು ಮಾಡುವ ಪದ್ಧತಿಯನ್ನು ಇಟ್ಟುಕೊಂಡು ಬಂದಿದ್ದಾರೆ. ಇದು ಹಿಂದಿನಿಂದ ಜಾರಿಯಲ್ಲಿ ಬಂದಿರತಕ್ಕದ್ದು. ಇದು ಮೊದಲೆ ಕೊಟ್ಟಿರತಕ್ಕದ್ದು; ನಾವು ಕೊಟ್ಟದ್ದು ಅಲ್ಲ. ವರಮಾನದ ದೃಷ್ಟಿಯಿಂದ ಮಾಡಿರಬೇಕೆಂಬುದು ರೆಕಾರ್ಡ್ ಪ್ರಕಾರ ಗೊತ್ತಾಗುತ್ತಿದೆ. ಇದು ಎಲ್ಲರಿಗೂ ಹಂಚಿಕೆ ಆದ ಮೇಲೆ ಉಳಿದಿರುವಂತಹ ಮೊಲಾಸಿಸ್.

ಶ್ರೀ ಕೆ.ಹೆಚ್. ರಂಗನಾಥ್ : ಮುಖ್ಯ ಮಂತ್ರಿಗಳು ಹೇಳುತ್ತಿದ್ದಾರೆ, ನಾನ್ ಮೊಲಾಸಿಸ್ ಬೇಸ್ಡ್ ಕೆಲವು ಮೊಲಾಸಿಸ್ ಅನ್ನು ಬಳಕೆ ಮಾಡತಕ್ಕದ್ದು ಎಂದು. ಮೊದಲೇ ನಾನ್ ಮೊಲಾಸಿಸ್ ಅನ್ನು ಉಪಯೋಗ ಮಾಡಿ ಸ್ಪಿರಿಟ್ ಮಾಡಬೇಕೆಂದು ಇತ್ತು; "ಕಂಡೀಷನ್ ಅನ್ನು ಯಾವಾಗ ಬದಲಾವಣೆ ಮಾಡಿದ್ದೀರಿ? ಬದಲಾವಣೆ ಮಾಡಿದ ಮೇಲೆ ಅವರು ಪ್ರೊಡಕ್ಷನ್ ಮಾಡತಕ್ಕದ್ದರಲ್ಲಿ ಎಷ್ಟು ಪರ್ಸೆಂಟೇಜ್ ಮೊಲಾಸಿಸ್ ಅನ್ನು ಉಪಯೋಗ ಮಾಡಿ ಮದ್ಯ ತಯಾರಿಸುತ್ತಿದ್ದಾರೆ. ಮತ್ತು ನಾನ್ ಮೊಲಾಸಿಸ್ ಅನ್ನು ಉಪಯೋಗ ಮಾಡಿ ಮದ್ಯವನ್ನು ತಯಾರಿಸುತ್ತಿದ್ದಾರೆ?

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸದಸ್ಯರು ಪ್ರತ್ಯೇಕ ಪ್ರಶ್ನೆ ಕೇಳಿದರೆ ಉತ್ತರಿಸುತ್ತೇನೆ. ಏಕೆಂದರೆ ಈ ರೀತಿ ಪರವಾನಗಿಯನ್ನು ಬಹಳ ಹಿಂದೆಯೇ ಕೊಟ್ಟಿದ್ದಾರೆ. ಆ ತಾರೀಖು ಈಗ ನನ್ನ ಹತ್ತಿರ ಇಲ್ಲ; ಅದನ್ನು ತಮಗೆ ತರಿಸಿಕೊಡುತ್ತೇನೆ.

ಬಿಡ್ಡುದಾರರಿಂದ ಬರಬೇಕಾದ ಬಾಕಿಗಳು

20 - ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು), ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :

ಅ) ಅಬಕಾರಿ ಇಲಾಖೆಯಲ್ಲಿನ ಬಿಡ್ಡುದಾರರಿಂದ ಸರ್ಕಾರಕ್ಕೆ ಬರಬೇಕಾಗಿರುವ ಬಾಕಿ ಹಣದ ಒಟ್ಟು ಮೊತ್ತವೆಷ್ಟು;

ಆ) ಆ ಪೈಕಿ ಲಕ್ಷಕ್ಕಿಂತ ಹೆಚ್ಚಿಗೆ ಬಾಕಿ ಇರುವವರ ಹೆಸರುಗಳೇನು?